**◆ ನೀವು ನೃತ್ಯಾಭ್ಯಾಸಕ್ಕಾಗಿ ಮುಂಬೈಯಿಂದ ಬೆಂಗಳೂರಿಗೆ ಬಂದವರು. ಅಂದಿನ ಬೆಂಗಳೂರು ಹೇಗಿತ್ತು?**

ನನ್ನ ವಿದ್ಯಾಭ್ಯಾಸ ಒಂದು ಹಂತಕ್ಕೆ ಬಂದಾಗ, ನೃತ್ಯವೂ ಜೊತೆಗಿರಲಿ, ಆದರೆ ಯುಪಿಎಸ್‌ಸಿ ಅಥವಾ ಮತ್ಯಾವುದಾದರೂ ವೃತ್ತಿಪರವಾದ ಉನ್ನತವಾದ ಅಭ್ಯಾಸವನ್ನೂ ಮಾಡು ಎಂದು ಹಿರಿಯರು ಹೇಳಿದರು. ಆದರೆ 'ನೃತ್ಯವೂ ಜೊತೆಗಿರಲಿ ಅಲ್ಲ, ನೃತ್ಯವೇ ಜೊತೆಗಿರಲಿ' ಎಂಬುದು ನನ್ನ ಹಟವಾಗಿತ್ತು. ಅಜ್ಜ ಮೈಸೂರಿನ ಗವರ್ನರ್ ಆಗಿದ್ದಾಗ ನಾನು ಬೆಂಗಳೂರಿನಲ್ಲಿ ಓಡಾಡಿದ್ದೆ. ಹಾಗಾಗಿ ನಗರ ನನಗೇನೂ ಹೊಸತಾಗಿರಲಿಲ್ಲ. ಬೆಂಗಳೂರಿನಲ್ಲಿ ಯು.ಎಸ್. ಕೃಷ್ಣ ರಾವ್ ಮತ್ತು ಚಂದ್ರಭಾಗಾದೇವಿ ದಂಪತಿ ನಮ್ಮ ಕುಟುಂಬಕ್ಕೆ ಪರಿಚಯದವರೇ. 1959ರಲ್ಲಿ ಅವರು ನನ್ನನ್ನು (ಪಂದನಲ್ಲೂರು ಶೈಲಿಯ) ಭರತನಾಟ್ಯ ಅಭ್ಯಾಸಕ್ಕಾಗಿ ಶಿಷ್ಯೆಯನ್ನಾಗಿ ಸ್ವೀಕರಿಸಿದರು. ಹೀಗೆ ನಾನು ನನ್ನ ಜೀವನವನ್ನು ನೃತ್ಯಕ್ಕಾಗಿ ಮೀಸಲಿಟ್ಟೆ. ನಂತರದ್ದು ನಿರಂತರ ಕಲಿಕೆಯ ಹಾದಿ. ಅಲ್ಲಿ ಗುರುಗಳು ಹೇಳಿದ ಮಾತುಗಳು ಸದಾ ನನ್ನೊಂದಿಗೆ ಇರುತ್ತವೆ. ಒಂದು ವಿಚಾರವನ್ನು ಹೇಳುವುದಾದರೆ, ಯಾವಾಗಲೂ ಸರಳವಾಗಿ ಇರುವಂತೆ ಗುರುಗಳು ಸಲಹೆ ಮಾಡುತ್ತಿದ್ದರು. ಸರಳತೆಯೆಂದರೆ ಅಸಂಗ್ರಹ. ಐಹಿಕ ವಸ್ತುಗಳೆಂದು ವಿಪರೀತ ಮೋಹ ಸಲ್ಲದು ಎಂದು ಹೇಳುತ್ತಿದ್ದರು. ಇಂದಿಗೂ ಅದನ್ನು ಅನುಸರಿಸಿಕೊಂಡು ಬರುತ್ತಿರುವೆ. ನನ್ನ ವಿಚಾರ, ವ್ಯವಹಾರಗಳಿಗೆ ತಕ್ಕಷ್ಟು ಸಂಪನ್ಮೂಲಗಳ ಹೊರತಾದ ಸಂಗ್ರಹ ನನ್ನಲ್ಲಿ ಇಲ್ಲ. ನೃತ್ಯಕ್ಕೆ ಸಂಬಂಧಿಸಿ ಅವರು ಇನ್ನೊಂದು ಮಾತು ಹೇಳುತ್ತಿದ್ದರು: 'ಗುಲಾಬಿಗಳ ದೊಡ್ಡ ಹಾರವೊಂದು ವೇದಿಕೆಯಲ್ಲಿ ಎದ್ದು ತೋರಬಹುದು. ಆದರೆ ದೃಗ್ಗೋಚರವಾದಷ್ಟು ಹೊತ್ತು ಮಾತ್ರ ನೋಡುಗರ ಮನಸ್ಸಿನಲ್ಲಿರುತ್ತದೆ. ಕಣ್ಣಿಂದ ಮಾಯವಾದುದು, ಮನಸ್ಸಿನಿಂದಲೂ ಮಾಯವಾಗುವುದು. ಆದರೆ ಸಾವಿರಾರು ಗುಲಾಬಿಹೂಗಳ ಪಕಳೆಗಳನ್ನು ಸಂಸ್ಕರಿಸಿ ಮಾಡುವ ಪುಟ್ಟದೊಂದು ಅತ್ತರಿನ ಸೀಸೆಯಿಂದ ಪೂಸಿಕೊಳ್ಳುವ ಒಂದೆರಡು ಹನಿ ಅತ್ತರು ಮನುಷ್ಯನ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಕ್ಷಣಹೊತ್ತು ಬೆರಳಿನ ಮೇಲೆ ಸೋಕುವ ಅತ್ತರಿನ ಕಂಪು ಸುತ್ತೆಲ್ಲ ಹರಡುವುದು. ಹಾಗೆಯೇ, ನೀನು ಕಲಿತ ಎಲ್ಲಾ ನೃತ್ಯವಿದ್ಯೆಯನ್ನು ವೇದಿಕೆಯಲ್ಲಿ ಪ್ರದರ್ಶನ ಮಾಡುವುದು ಸಲ್ಲ. ಅದರಿಂದ ಕ್ಷಣ ಹೊತ್ತಿಗೆ ಭಾರೀ ಚಪ್ಪಾಳೆಗಳ ಸುರಿಮಳೆಯಾಗಬಹುದು. ಆದರೆ ಅದು ಕಲಾರಸಿಕರ ಮನಸ್ಸಿನಲ್ಲಿ ಆಹ್ಲಾದವನ್ನು ಹುಟ್ಟಿಸಲಾರದು. ಆ ಕ್ಷಣಿಕ ಉದ್ರೇಕವು ಕಲೆಯ ಉದ್ದೇಶವಲ್ಲ. ಅತ್ತರಿನಂತೆ, ನೀನು ಕಲಿತಿರುವ ವಿದ್ಯೆಯಲ್ಲಿ ಅತ್ಯುತ್ತಮವಾದುದನ್ನು ಅತಿ ಸುಂದರರೂಪದಲ್ಲಿ ಪ್ರೇಕ್ಷಕರಿಗಾಗಿ ಪ್ರಸ್ತುತಪಡಿಸು. ಪಾಂಡಿತ್ಯ ಪ್ರದರ್ಶನದಿಂದ ಏನೇನೂ ಪ್ರಯೋಜನವಿಲ್ಲ.' – ಹೌದು. ಇದು ಭಾರತೀಯ ಕಲಾಪ್ರಕಾರಗಳ ಅಂತರಾಳದ ಸಂದೇಶವೂ ಆಗಿದೆ. ನನ್ನ ಜ್ಞಾನದಾಹ, ಕಲಿಕೆ ಎಲ್ಲವೂ ನನ್ನದು. ಪ್ರೇಕ್ಷಕರಿಗೆ ಅದರಿಂದ ಆಯ್ದ ಅತ್ಯಂತ ಸುಂದರ ವಿಚಾರವನ್ನಷ್ಟೇ ಕೊಡಬೇಕೆಂದು ನಂಬಿರುವೆ. ಬದುಕಿಗೂ ಇದು ಅನ್ವಯಿಸುತ್ತದೆ.

**◆ ಅಧ್ಯಾತ್ಮದತ್ತ ನಿಮ್ಮ ಚಿತ್ತ ಹೆಚ್ಚು ವಾಲುವಂತೆ ಕಾಣಿಸುತ್ತದೆ. ಕಲಾಪಯಣದಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಎಲ್ಲರಿಗೂ ಇದೇ ಅನುಭವವಾಗುವುದು ಎನಿಸುತ್ತದೆಯೇ?**

ಅಧ್ಯಾತ್ಮ ಎನ್ನುವುದು ತುಂಬಾ ದೊಡ್ಡ ಪದ. ಅದನ್ನು ಕೆಲವು ಪದಗಳಲ್ಲಿ ವ್ಯಾಖ್ಯಾನಿಸುವುದು ಸಾಧ್ಯವಿಲ್ಲ. ಎಲ್ಲ ಕಲಾಪ್ರಕಾರಗಳು ಅಧ್ಯಾತ್ಮದ ತಳಹದಿಯ ಮೇಲೆಯೇ ನಿಂತಿವೆ. ಕೆಲವು ಸ್ಪಷ್ಟಗೋಚರವಾಗಿರಬಹುದು ಮತ್ತೆ ಕೆಲವು ಪರೋಕ್ಷ ರೂಪದಲ್ಲಿರಬಹುದು. ಆದಿಕಲಾವಿದರಾದ ನಟರಾಜ ಮತ್ತು ನಟೇಶ್ವರಿ ಪಾರ್ವತಿದೇವಿಯನ್ನು ಸ್ತುತಿಸುತ್ತ, ಪ್ರದರ್ಶನವನ್ನು ಆರಂಭಿಸುವ ನಾವು ಎಷ್ಟೊಂದು ದೇವ ದೇವಿಯರ ಕಥಾಪ್ರಸ್ತುತಿಗಳನ್ನು ನೀಡುತ್ತೇವೆ. ಎಲ್ಲ ಪ್ರಸ್ತುತಿಗಳೂ ನಮ್ಮನ್ನು, ನಾವಿರುವ ಜಾಗದಿಂದ ಎತ್ತರಕ್ಕೆ ಏರಿಸಲು ಪ್ರಯತ್ನಿಸುತ್ತವೆ. ಅವೆಲ್ಲದಕ್ಕೂ ಉದ್ದೇಶವೆಂಬುದು ಇದೆ. ಉದಾಹರಣೆಗೆ, ನಾವು 'ಮಹಿಷಾಸುರ ಮರ್ದಿನಿ' ಎಂಬ ಕಥಾಭಾಗವನ್ನು ಪ್ರದರ್ಶಿಸುತ್ತಿರುವಾಗ, ಋಣಾತ್ಮಕ ಶಕ್ತಿಗಳನ್ನು ಸೋಲಿಸಿ ಸಕಾರಾತ್ಮಕ ಶಕ್ತಿಯು ಗೆಲುವು ಪಡೆಯುವುದನ್ನು ನೋಡುತ್ತೇವೆ. ಋಣಾತ್ಮಕ ಶಕ್ತಿಗಳು ಮೊದಲು ದಟ್ಟವಾಗುತ್ತಾ, ಕೊನೆಗೆ ಸಕಾರಾತ್ಮಕ ಶಕ್ತಿಯ ಎದುರು ಸೋಲುತ್ತವೆ. ದೈವೀಶಕ್ತಿಯೊಂದರ